ಕರ್ನಾಟಕ ವಿಧಾನಸಭೆ
KARNATAKA LEGISLATIVE ASSEMBLY

ಮಂಗಳವಾರ, 3ನೇ ಡಿಸೆಂಬರ್ 1991 ಮಾರ್ಗಶಿರ ೧೨, ಶಕ ೧೯೧೩

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 56 ನಿಮಿಷಕ್ಕೆ ಸಮಾವೇಶಗೊಂಡಿತು

ಉಪಾಧ್ಯಕ್ಷರು : (**ಶ್ರೀಮತಿ ನಾಗಮ್ಮ ಕೇಶಮೂರ್ತಿ**) ಅವರು ಪೀಠವನ್ನಲಂಕರಿಸಿದ್ದರು.

ಉಪಾಧ್ಯಕ್ಷರು : ಬಿಸನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಇನ್ನು ನಡೆಯುತ್ತಿದೆ. ಅದು ಇನ್ನೂ ಮುಗಿದಿಲ್ಲ. ಆ ಕಾರಣದಿಂದ ಈಗ ಸಭೆಯು ಮುಂದುವರೆದು ಮತ್ತೆ 1 ಗಂಟೆಗೆ ಸೇರುತ್ತದೆ.

(ಸದನವು ಪುನಃ 1 ಗಂಟೆ 25 ನಿಮಿಷಕ್ಕೆ ಸಮಾವೇಶಗೊಂಡಿತು. ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣರವರು) ಪೀಠವನ್ನಲಂಕರಿಸಿದರು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

1. ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿ) : ಸನ್ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 213 (2)ನೇ ಅನುಚ್ಛೇದದ ಮೇರೆಗೆ :

ಅ) 1991ನೇ ಸಾಲಿನ ಕರ್ನಾಟಕ ಸಾದಿಲ್ವಾರು ನಿಧಿ ತಾತ್ಕಾಲಿಕ ತಿದ್ದುಪಡಿ) ಅಧ್ಯಾದೇಶ, (1991ನೇ ಸಾಲಿನ ಅದ್ಯಾದೇಶದ ಸಂಖ್ಯೆ 10);

ಆ) ವರ್ತಕರಿಂದ ಸೇಂಗಾ ಅಥವಾ ಬೀಜಗಳ ಮೇಲೆ ಪಾವತಿ ಮಾಡಬೇಕಾಗಿರುವ ತೆರಿಗೆ ವಿನಾಯಿತಿಗೆ ಸಂಬಂಧಿಸಿದಂತೆ ದಿನಾಂಕ 1-10-1991 ರಂದು ಹೊರಡಿಸಲಾದ (1) ಎಫ್‌ಡಿ 115 ಸಿಎಸ್‌ಎಲ್ 91 ಕ್ರಮಾಂಕದ ಅಧಿಸೂಚನೆ,

ಇ) ಸೂರ್ಯಕಾಂತಿ ಬೀಜ ಅಥವಾ ಕೊಬ್ಬರಿಯಿಂದ ಕರ್ನಾಟಕದಲ್ಲಿ ತಯಾರಿಸಿದ ಸೂರ್ಯಕಾಂತಿ ಎಣ್ಣೆ ಅಥವಾ ಕೊಬ್ಬರಿ ಎಣ್ಣೆಯ ಮಾರಾಟದ ಮೇಲಿನ ತೆರಿಗೆಯನ್ನು ವರ್ತಕರಿಗೆ ವಿನಾಯಿತಿ ಹೊಂದುವುದಕ್ಕೆ ಸಂಬಂಧಿಸಿದಂತೆ ದಿನಾಂಕ 1-10-1991ರಂದು ಹೊರಡಿಸಲಾದ 2) ಎಫ್‌ಡಿ 115 ಸಿಎಸ್‌ಎಲ್ 91ನೇ ಕ್ರಮಾಂಕದ ಅಧಿಸೂಚನೆ;

ಈ) ದಿನಾಂಕ 27-3-1991ರಂದು ಹೊರಡಿಸಲಾದ ಎಫ್‌ಡಿ 78 ಸಿಎಸ್‌ಎಲ್ 1991ರ (14) ರ ಕ್ರಮಾಂಕದ 1ನೇ ಕ್ರಮ ಸಂಖ್ಯೆ ಮತ್ತು ಅಧಿಸೂಚನೆಯಲ್ಲಿನ ದಾಖಲಾತಿಯ ಸಂಬಂಧದಲ್ಲಿ ದಿನಾಂಕ 1-10-1991ರಂದು ಹೊರಡಿಸಲಾದ 3) ಎಫ್‌ಡಿ 115 ಸಿಎಸ್‌ಎಲ್ 91ನೇ ಕ್ರಮಾಂಕದ ಅಧಿಸೂಚನೆ, ಹಾಗೂ

ಉ) 1957ನೇ ಇಸವಿಯ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ 8(ಎ) ನ ಕಲಮಿನ ಮೇರೆಗೆ-

ಕುಸುಂಬೆ ಬೀಜಗಳ ಖರೀದಿಯ ಮೇಲಿನ ತೆರಿಗೆ ವಿನಾಯಿತಿಗೆ ಸಂಬಂಧಿಸಿದಂತೆ ದಿನಾಂಕ 1-10-1991ರಂದು ಹೊರಡಿಸಲಾದ 4) ಎಫ್‌ಡಿ 115 ಸಿಎಸ್‌ಎಲ್ 91ರ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

2. ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ 1976ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಅಧಿನಿಯಮದ 42 (3)ನೇ ಕಲಮಿನ ಮೇರೆಗೆ;

1988-89ನೇ ಸಾಲಿನ ಮಂಗಳೂರಿನಲ್ಲಿರುವ ಮಂಗಳೂರು ವಿಶ್ವವಿದ್ಯಾಲಯದ ಉತ್ತರಗಳೊಂದಿಗೆ ವಾರ್ಷಿಕ ಲೆಕ್ಕಪತ್ರಗಳನ್ನು ಹಾಗೂ ಲೆಕ್ಕ ಪರಿಶೋಧನಾ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

3. ಶ್ರೀ ಕೆ.ಹೆಚ್. ಪಾಟೀಲ್ (ಗಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1983ನೇ ಸಾಲಿನ ಕರ್ನಾಟಕ ಜಿಲ್ಲಾ ಪರಿಷತ್ತುಗಳು ತಾಲ್ಲೂಕು ಪಂಚಾಯತ್ ಸಮಿತಿಗಳು ಮಂಡಲ ಪಂಚಾಯಿಗಳ ಹಾಗೂ ನ್ಯಾಯ ಪಂಚಾಯತಿಗಳ ಅಧಿನಿಯದ 309 (3)ನೇ ಕಾಲಮಿನ ಮೇರೆಗೆ :

ಸರ್ಕಾರದವರು ಕೈಗೊಂಡ ಕ್ರಮದ ವ್ಯಾಪಕ ವಿವರಣಾ ಪತ್ರದೊಂದಿಗೆ 1990-91ನೇ ಸಾಲಿನ ಚಿತ್ರದುರ್ಗದಲ್ಲಿರುವ ಚಿತ್ರದುರ್ಗ ಜಿಲ್ಲಾ ಪರಿಷತ್ತಿನ ವಾರ್ಷಿಕ ಆಡಳಿತ ವರದಿಯನ್ನು ಸಭೆಯ ಮುಂದಿಡುತ್ತೇನೆ.

4. ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಯವರ ಪರವಾಗಿ)

ಅ) 1987ನೇ ಇಸವಿಯ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಶಾಸನದ 48(5)ನೇ ಕಲಮಿನ ಮೇರೆಗೆ;

1987ರಿಂದ 1990ನೇ ಸಾಲುಗಳವರೆಗಿನ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿ; ಹಾಗೂ;

ಆ) 1964ನೇ ಇಸವಿಯ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಶಾಸನದ 17(3)ನೇ ಕಲಮಿನ ಮೇರೆಗೆ;

1991-92ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತ ಒಳಚರಂಡಿ ಮಂಡಳಿಯ ವಾರ್ಷಿಕ ವಿತ್ತೀಯ ತಃಖ್ತೆಯನ್ನು ಸಭೆಯ ಮುಂದಿಡುತ್ತೇನೆ.

5. ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಹಾಗೂ ಮಧ್ಯಮ ಕೈಗಾರಿಕೆ ಮಂತ್ರಿಯವರು) : ಮಾನ್ಯ ಅಧ್ಯಕ್ಷರೆ,

1956ನೇ ಇಸವಿಯ ಕಂಪನಿಗಳ ಅಧಿನಿಯಮದ 619(ಎ) ಕಲಮಿನ ಮೇರೆಗೆ ಈ ಕೆಳಕಂಡ ವಾರ್ಷಿಕ ವರದಿಗಳನ್ನು ಸಭೆಯ ಮುಂದಿಡುತ್ತೇನೆ.

ಅ) 1988-89ನೇ ಸಾಲಿನ ಕರ್ನಾಟಕ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 13ನೇ ವಾರ್ಷಿಕ ವರದಿ;

ಆ) 1989-90ನೇ ಸಾಲಿನ ಮೈಸೂರು ಸಕ್ಕರೆ ಕಂಪನಿ ನಿಯಮಿತದ 56ನೇ ವಾರ್ಷಿಕ ವರದಿ;

ಇ) 1990-91ನೇ ಸಾಲಿನ ಮೈಸೂರು ಲವಣ ಮತ್ತು ರಸಾಯನಿಕ ಕಂಪನಿ ನಿಯಮಿತದ 27ನೇ ವಾರ್ಷಿಕ ವರದಿ;

ಈ) 1989-90ನೇ ಸಾಲಿನ ಚಾಮುಂಡಿ ಯಂತ್ರ ಸಲಕರಣೆಗಳು ನಿಯಮಿತದ 14ನೇ ವಾರ್ಷಿಕ ವರದಿ;

ಉ) 1988-89ನೇ ಸಾಲಿನ ಮೈಸೂರು ಅರಗು ಮತ್ತು ಬಣ್ಣ ತಯಾರಿಕಾ ಕಾರ್ಖಾನೆ ನಿಯಮಿತದ 43ನೇ ವಾರ್ಷಿಕ ವರದಿ,

ಊ) 1990-91ನೇ ಸಾಲಿನ ಮೈಸೂರು ಕಾಗದ ಕಾರ್ಖಾನೆ ನಿಯಮಿತದ 56ನೇ ವಾರ್ಷಿಕ ವರದಿ;

ಋ) 1989-90ನೇ ಸಾಲಿನ ಕರ್ನಾಟಕ ಕೈಮಗ್ಗ, ಅಭಿವೃದ್ಧಿ ನಿಗಮ ನಿಯಮಿದ 15ನೇ ವಾರ್ಷಿಕ ವರಿದ,

ೠ) 1989-90ನೇ ಸಾಲಿನ ಕರ್ನಾಟಕ ರಾಜ್ಯ ನಾರು ಅಭಿವೃದ್ಧಿ ನಿಗಮ ನಿಯಮಿತದ 5ನೇ ವಾರ್ಷಿಕ ವರದಿ;

ಎ) 1990-91ನೇ ಸಾಲಿನ ಮೈಸೂರು ವಿದ್ಯುತ್ ದೀಪಗಳ ತಯಾರಿಕಾ ಕಾರ್ಖಾನೆ (ಮೈಸೂರು ಲ್ಯಾಂಪ್ ವರ್ಕ್ಸ್) ನಿಯಮಿತದ 55ನೇ ವಾರ್ಷಿಕ ವರದಿ;

ಏ) 1989-90ನೇ ಸಾಲಿನ ಕರ್ನಾಟಕ ರಾಜ್ಯ ಎಲೆಕ್ಟ್ರಾನಿಕ್ಸ್ ಡೆವೆಲಪ್‌ಮೆಂಟ್ ನಿಗಮ ನಿಯಮಿತದ 13ನೇ ವಾರ್ಷಿಕ ವರದಿ;

ಐ) 1989-90ನೇ ಸಾಲಿನ ಎನ್.ಜಿ.ಇ.ಎಫ್. ನಿಯಮಿತದ 25ನೇ ವಾರ್ಷಿಕ ವರದಿ ಮತ್ತು ಲೆಕ್ಕಪತ್ರ ವರದಿ.

6. ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, (ಮಾನ್ಯ ವಾರ್ತಾ ಹಾಗೂ ಪ್ರಚಾರ ರಾಜ್ಯ ಮಂತ್ರಿಯವರ) ಪರವಾಗಿ

1956ನೇ ಸಾಲಿನ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ;

1989-90ನೇ ಸಾಲಿನ ಜಂಗಲ್ ಲಾಡ್ಜಸ್ ಮತ್ತು ರಿಸಾರ್ಟ್ಸ್ ನಿಯಮಿತದ 10ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

7. ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, (ಮಾನ್ಯ ಸಣ್ಣ ಕೈಗಾರಿಕಾ ರಾಜ್ಯ ಮಂತ್ರಿಯವರ ಪರವಾಗಿ)

1956ನೇ ಸಾಲಿನ ಕಂಪನಿಗಳ ಅಧಿನಿಯಮ 619(ಎ) ಕಲಮಿನ ಮೇರೆಗೆ;

1989-90ನೇ ಸಾಲಿನ ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ 30ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

8. ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, (ಮಾನ್ಯ ಪಶುಸಂಗೋಪನೆ ರಾಜ್ಯ ಮಂತ್ರಿಯವರ ಪರವಾಗಿ)

ಅ) 1973ನೇ ಇಸವಿ ಕರ್ನಾಟಕ ಕುರಿ ಮತ್ತು ಕುರಿ ಉತ್ಪಾದನಾ ಅಭಿವೃದ್ಧಿ ಅಧಿನಿಯಮದ 24ನೇ ಕಲಮಿನ ಮೇರೆಗೆ;

1990-91ನೇ ಸಾಲಿನ ಕರ್ನಾಟಕ ಕುರಿ ಮತ್ತು ಕುರಿ ಉತ್ಪಾದನಾ ಅಭಿವೃದ್ಧಿ ಮಂಡಳಿಯ ವಾರ್ಷಿಕ ವರದಿ; ಹಾಗೂ

ಅ) 1956ನೇ ಇಸವಿ ಕಂಪನಿಗಳ ಅಧಿನಿಯಮದ 619(ಎ) ಕಲಮಿನ ಮೇರೆಗೆ;

1987-88ನೇ ಸಾಲಿನ ಕರ್ನಾಟಕ ಗೋಡಂಬಿ ಅಭಿವೃದ್ಧಿ ನಿಗಮ ನಿಯಮಿತದ 10ನೇ ವಾರ್ಷಿಕ ವರದಿಯನ್ನು ಸಭೆಯ ಮುಂದಿಡುತ್ತೇನೆ.

9. ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, (ಮಾನ್ಯ ಇಂಧನ ರಾಜ್ಯ ಮಂತ್ರಿಯವರ ಪರವಾಗಿ)

1948ನೇ ಇಸವಿ ವಿದ್ಯುಚ್ಛಕ್ತಿ (ಸರಬರಾಜು) ಅಧಿನಿಯಮದ 61(3) ನೇ ಕಲಮಿನ ಮೇರೆಗೆ;

1991-92ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವಾರ್ಷಿಕ ವಿತ್ತೀಯ ತಃಖ್ತೆ ಹಾಗೂ 1990-91ನೇ ಸಾಲಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಪರಿಷ್ಕೃತ ಆರ್ಥಿಕ ವಿತ್ತೀಯ ತಃಖ್ತೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು : ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿಯವರು : ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ, ರಾಷ್ಟ್ರಪತಿಯವರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯು ಮುಂದಿಡುತ್ತೇನೆ.